# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ವಾರ್ಡ್ ಸಂಖ್ಯೆ 10/ಸಭೆ/ಪಿಆರ್/01 /2020–21 ದಿನಾಂಕ: 03/10/2020

**ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020–21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ 10 ದೊಡ್ಡಬೊಮ್ಮಸಂದ್ರ ವಾರ್ಡ್ ಕಛೇರಿಯಲ್ಲಿ ದಿನಾಂಕ 03/10/2020 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ವಾರ್ಡ್ ಸಮಿತಿ ಸದಸ್ಯರು**

1. ಶ್ರೀ ಅಮರ್ ಸಿಂಗ್, ವಸತಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು
2. ಶ್ರೀ ವಿಜಯ್ ಬೆನಗಿ, ವಸತಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು
3. ಶ್ರೀ ಸುಜಿತ್ ಸೋನಿಲ್, ವಸತಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು
4. ಶ್ರೀ ಪ್ರಕಾಶ್ ಕೆ, ಸದಸ್ಯರು
5. ಶ್ರೀ ದಯಾಳ್, ಸದಸ್ಯರು
6. ಶ್ರೀ ಶ್ರೀನಿವಾಸ್, ಸದಸ್ಯರು
7. ಶ್ರೀ ಆರ್.ಎಂ. ಶ್ರೀನಿವಾಸ್, ಸದಸ್ಯರು
8. ಶ್ರೀ ಗೋಪಾಲ್‌ಕೃಷ್ಣ, ಸದಸ್ಯರು
9. ಶ್ರೀ ಮಲ್ಯಾದಿ, ಸದಸ್ಯರು

**ಹಾಜರಿದ್ದ ಅಧಿಕಾರಿ /ನೌಕರರು**

1. ಶ್ರೀ ಜಿ.ಶ್ರೀನಿವಾಸಮೂರ್ತಿ, ನೋಡಲ್ ಅಧಿಕಾರಿ ಹಾಗೂ ಸ.ಕಾ.ಅ, ಕೊ.ಉ.ವಿ
2. ಶ್ರೀ ಶ್ವೇತಾ ಎನ್.ಆರ್, ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು
3. ಶ್ರೀ ಬಸವರಾಜು, ಸಹ ಕಂದಾಯ ಅಧಿಕಾರಿ
4. ಶ್ರೀಮತಿ ಡಾ॥ ಶೋಭ ನಾಗೇಶ್, ಆರೋಗ್ಯ ವೈದ್ಯಾಧಿಕಾರಿ
5. ಶ್ರೀ ಉದಯ್‌ಕುಮಾರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ
6. ಶ್ರೀ ಧನಂಜಯ ಪಿ,
7. ಶ್ರೀಮತಿ ಸುಮನ ಎಲ್.ಎನ್, ಸಹಾಯಕ ಅಭಿಯಂತರರು, ರೋಡ್ ಇನ್‌ಫ್ರಸ್ಟ್ರಕ್ಚರ್
8. ಶ್ರೀ ಕೆ.ಎನ್ ಬಾಬು ರೆಡ್ಡಿ, ಕಿರಿಯ ಅಭಿಯಂತರರು, ವಿದ್ಯುತ್‌ಚ್ಛಕ್ತಿ
9. ಶ್ರೀ ನಾಗಪ್ಪ, ಕಂದಾಯ ಪರಿವೀಕ್ಷಕರು
10. ಶ್ರೀ ಮಹೇಶ್ ಕುಮಾರ್ ಎಲ್, ಕಿರಿಯ ಆರೋಗ್ಯ ಪರಿವೀಕ್ಷಕರು
11. ಶ್ರೀ ಸುರೇಶ್ ಈ.ಎಸ್, ಬಿಬಿಎಂಪಿ ಮಾರ್ಷಲ್

**ಹಾಜರಿದ್ದ ಸಮಿತಿ ಸದಸ್ಯರು ಹಾಗೂ ನಾಗರೀಕರು**

1. ಶ್ರೀ ಮಲ್ಯಾದ್ರಿ, ಸದಸ್ಯರು
2. ಶ್ರೀ ಆರ್.ಎಂ. ಶ್ರೀನಿವಾಸ್, ಸದಸ್ಯರು

3. ಶ್ರೀ ಡಿ.ಎಸ್ ಜನಾರ್ಧನ ಮೂರ್ತಿ, ಸದಸ್ಯರು
4. ಶ್ರೀ ಗೋಪಾಲ ಕೃಷ್ಣ, ಸದಸ್ಯರು
5. ಶ್ರೀ ಎಂ.ಈ ಪಿಳ್ಳಪ್ಪ, ನಾಗರೀಕರು
6. ಶ್ರೀ ಬಿ.ಸಿ ನಾಗೇಶ್, ನಾಗರೀಕರು
7. ಶ್ರೀ ಜಿ.ರಮೇಶ್, ನಾಗರೀಕರು

**ಶ್ರೀ ಜಿ. ಶ್ರೀನಿವಾಸಮೂರ್ತಿ, ನೋಡಲ್ ಅಧಿಕಾರಿ:-** ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು.

**ಶ್ರೀ ಮಹೇಶ್, ಕಿ.ಆ.ಪ** :- ಘನತ್ಯಾಜ್ಯ ನಿರ್ವಹಣೆಯ ಕಾರ್ಯ ವೈಖರಿಯ ಬಗ್ಗೆ ತಿಳಿಸಿರುತ್ತಾರೆ.

**ಶ್ರೀ ಬಿ.ಕೆ ಸುರೇಶ್, ಪೌರಕಾರ್ಮಿಕ** ರವರು :- ಪ್ರತಿ ದಿನ ಹಸಿ ತ್ಯಾಜ್ಯವನ್ನು, ವಾರಕ್ಕೆ 2 ಬಾರಿ ಒಣ ತ್ಯಾಜ್ಯವನ್ನು ಸಂಗ್ರಹಿಸಿ ವಿಲೇವಾರಿ ಮಾಡಲು, Loading and Unloading ಜಾಗವನ್ನು ಬೇರೆಡೆಗೆ ಸ್ಥಳಾಂತರಿಸಲು ಕೋರಿರುತ್ತಾರೆ ಹಾಗೂ ಪೌರಕಾರ್ಮಿಕರಿಗೆ ಕನಿಷ್ಟ ಸೌಕರ್ಯಗಳನ್ನು ಒದಗಿಸಲು ಕೋರಿರುತ್ತಾರೆ.

**ಶ್ರೀ ಗೋಪಾಲಕೃಷ್ಣ, ಸದಸ್ಯರು, ಧನಂಜಯ ನಾಗರೀಕರು** :- ತೆಂಗಿನ ಮರದ ಎಲೆಗಳನ್ನು ಹಾಗೂ ಮರಗಳ ಎಲೆಗಳನ್ನು ಶೀಘ್ರವಾಗಿ ತೆರವುಗೊಳಿಸಿ ವಿಲೇವಾರಿ ಮಾಡಲು, ಬ್ಲಾಕ್‌ಸ್ಪಾಟ್‌ಗಳ ಸ್ವಚ್ಚತೆ, ಕಸ ವಿಲೇವಾರಿಯ ಬಗ್ಗೆ, ಖಾಲಿ ನಿವೇಶನಗಳ ಸ್ವಚ್ಚತಾ ಕಾರ್ಯನಿರ್ವಹಿಸುವ ಬಗ್ಗೆ ಹಾಗೂ ಕಸ ವಿಂಗಡಣೆ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಬಗ್ಗೆ ಕೋರಿರುತ್ತಾರೆ.

**ಶ್ರೀಮತಿ ಡಾ|| ಶೋಭ ನಾಗೇಶ್, ಆರೋಗ್ಯ ವೈದ್ಯಾಧಿಕಾರಿ** :- ಕೋವಿಡ್ 19 ಗೆ ಸಂಬಂಧಿಸಿದಂತೆ ವಾರ್ಡ್ ನಂ 10ರ ವ್ಯಾಪಿಯಲ್ಲಿ ಈಗಾಗಲೇ ಸುಮಾರು 7000 ಜನರಿಗೆ ಪರೀಕ್ಷೆ ಮಾಡಲಾಗಿರುತ್ತದೆ. ಪ್ರತಿ ದಿನ 400 ಜನರಿಗೆ ಪರೀಕ್ಷೆ ಮಾಡಲಾಗಿ 30 ಜನರಿಗೆ ಸೋಂಕು ಪತ್ತೆ ಆಗಿರುವ ಪ್ರಕರಣಗಳು ಕಂಡು ಬಂದಿರುತ್ತದೆ. ಗಾಳಿಯಿಂದಲೂ ಸಹ ಹರಡಿರುವ ಸಾದ್ಯತೆಯಿರುವುದರಿಂದ ವಸತಿ ಸಮುಚ್ಚಯದ ನಿವಾಸಿಗಳಿಗೆ ಹಾಗೂ ಅಂಗಡಿ ಮಾಲೀಕರಿಗೂ ಸಹ ಕಡ್ಡಾಯವಾಗಿ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಹಾಗೂ ಕೋವಿಡ್ ಬಗ್ಗೆ ಜನರಲ್ಲಿ ಅರಿವು ಮೂಡಿಸಿ ಕೋವಿಡ್ ಸೋಂಕು ಹರಡದಂತೆ ತಡೆಗಟ್ಟಲು ಮುಂಜಾಗ್ರತಾ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ. **ನೋಡಲ್ ಅಧಿಕಾರಿ** ರವರು ಕೋವಿರ್ಡ್ 19 ಪರೀಕ್ಷೆಗೆ ಒಳಪಟ್ಟ ನಾಗರೀಕರಿಗೆ ಅಳಿಸಲಾಗದ ಶಾಹಿಯನ್ನು ಹಾಕಿದರೆ ಪರೀಕ್ಷೆಗೆ ಒಳಪಟ್ಟಿರುವುದು ಖಾತ್ರಿಯಾಗುವುದರಿಂದ ಅಳಿಸಲಾಗದ ಶಾಹಿಯನ್ನು ಸರ್ಕಾರದಿಂದ ಪಡೆಯಲು ತಿಳಿಸಿರುತ್ತಾರೆ.

**ಶ್ರೀ ರಾಮಸಂಜೀವಯ್ಯ, ನಾಗರೀಕರು** :- ಬಿ.ಇ.ಎಲ್ 2ನೇ ಬ್ಲಾಕ್‌ನಲ್ಲಿ ಕೇವಲ ಹಿರಿಯ ನಾಗರೀಕರೇ ಇರುವ ಮನೆಯಲ್ಲಿ ಕೋವಿಡ್-19 ಸೋಂಕು ಹರಡಿರುವುದು ದೃಡ ಪಟ್ಟಿದ್ದು, ಬೇರೆಯವರು ಮನೆಯಲ್ಲಿ ಇಲ್ಲದೆ ಇರುವುದರಿಂದ ಆಹಾರ ಕಿಟ್ ಹಾಗೂ ಆರೋಗ್ಯ ವಿಚಾರಣೆ ಬಗ್ಗೆ ಮೇಲ್ವಿಚಾರಣೆ ಮಾಡಲು ಕೋರಿರುತ್ತಾರೆ.

**ಆರ್.ಎಂ ಶ್ರೀನಿವಾಸ್ & ಪಿಳ್ಳಪ್ಪ, ಸದಸ್ಯರು** :- ಬೃಹತ್ ನೀರುಗಾಲುವೆಯ ನೀರು ತುಂಬಿ ಬಡಾವಣೆಯಲ್ಲಿ ನೀರು ಹರಿಯುತ್ತಿರುವುದರಿಂದ ಮಳೆಗಾಲದಲ್ಲಿ ಮಳೆ ನೀರುಗಾಲುವೆಯ ಹೂಳು ಮತ್ತು ಮಣ್ಣನ್ನು ದಿನ ಬಿಟ್ಟು ದಿನ ತೆಗೆಯಲು ಕೋರಿರುತ್ತಾರೆ.

ದೊಡ್ಡಬೊಮ್ಮಸಂದ್ರ ಕೆರೆಯಲ್ಲಿ ಕೊಡಿಗೆಹಳ್ಳಿ ಏರಿ ಕಡೆ ನೀರು ಹೋಗುವ ಜಾಗವನ್ನು ಪೂರ್ಣವಾಗಿ ಮುಚ್ಚಿರುತ್ತಾರೆ. ಆದ್ದರಿಂದ ಕೆರೆ ವಿಭಾಗ ಅಥವಾ ಬೃಹತ್ ನೀರು ಗಾಲುವೆಗೆ ಸದರಿ ಜಾಗವನ್ನು ಜಂಟಿ ಪರಿಶೀಲನೆ ಮಾಡಿ ತೆರವು ಗೊಳಿಸಲು ನಿರ್ದೇಶನ ನೀಡಲು ಕೋರಿರುತ್ತಾರೆ.

**ಶ್ರೀನಿವಾಸ್, ಪಿಳ್ಳಪ್ಪ, ಸದಸ್ಯರು** :- ದೊಡ್ಡಬೊಮ್ಮಸಂದ್ರ ವ್ಯಾಪ್ತಿಯಲ್ಲಿ ಬರುವ ಬಡ ಮಕ್ಕಳಿದ್ದು, ಶಾಲೆಯ ಶುಲ್ಕ ಮರುಪಾವತಿಗಾಗಿ ಅರ್ಜಿ ಸಲ್ಲಿಸಿದ್ದು, ಶೀಘ್ರವಾಗಿ ಶುಲ್ಕ ಮರುಪಾವತಿಸಲು ಕಲ್ಯಾಣ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಕೋರಿದರು.

**ಶ್ರೀ ಮಲಾದ್ರಿ, ಸದಸ್ಯರು** :- ದೊಡ್ಡಬೊಮ್ಮಸಂದ್ರ ಮುಖ್ಯ ರಸ್ತೆಯಲ್ಲಿ ಬರುವ ರುದ್ರಭೂಮಿಯನ್ನು ಸ್ವಚ್ಚಗೊಳಿಸಲು ಹಾಗೂ ರುದ್ರಭೂಮಿಯ ಮುಂಭಾಗದ ಜಾಗವನ್ನು ರಿಲಯನ್ಸ್ ಫ್ರೆಶ್‌ನವರು ನಮ್ಮ ಜಾಗ ಎಂದು ನಾಮಫಲಕವನ್ನು ಪ್ರದರ್ಶಿಸಿರುವುದರಿಂದ ಸದರಿ ಜಾಗಕ್ಕೆ ಜಂಟಿ ತಪಾಸಣೆ ಮಾಡಿ ಬಿಬಿಎಂಪಿ ವಶಕ್ಕೆ ಪಡೆಯಲು ಕೋರಿರುತ್ತಾರೆ.

**ಸಾರ್ವಜನಿಕರು** : ಕಾವೇರಿ ನೀರು ವಾರಕ್ಕೆ 1 ಬಾರಿ ಬರುತ್ತಿರುವುದರಿಂದ ವಾರ್ಡ್ ವ್ಯಾಪ್ತಿಯಲ್ಲಿ ನೀರಿನ ಸಮಸ್ಯೆ ತಲೆದೋರಿರುತ್ತದೆ. ಆದ್ದರಿಂದ ವಾರಕ್ಕೆ 2 ಬಾರಿ ನೀರು ಸರಬರಾಜಾಗಲು ಅನುವು ಮಾಡಿಕೊಡಲು ಕೋರಿರುತ್ತಾರೆ.

ಶ್ರೀ ಜಿ.ಶ್ರೀನಿವಾಸಮೂರ್ತಿ, ನೋಡಲ್ ಅಧಿಕಾರಿ ರವರು ಈ ಮೇಲ್ಕಂಡ ಅಂಶಗಳ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು ಹಾಗೂ ಸದಸ್ಯರೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Sweetha.N.K.
ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 10, ದೊಡ್ಡಬೊಮ್ಮಸಂದ್ರ

3/10/2020
ನೋಡಲ್ ಅಧಿಕಾರಿ ವಾರ್ಡ್-10 ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರರು
ಕೊಡಿಗೇಹಳ್ಳಿ ಉಪವಿಭಾಗ

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಆರೋಗ್ಯಾಧಿಕಾರಿಗಳು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ವಾರ್ಡ್ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
9. ಕಛೇರಿ ಕಡತಕ್ಕೆ.